276

ತಾರೀಖು 20ನೇ ಮಾರ್ಚ 1877.

ಇದರಿಂದ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟ್ ಜುಡಿಷಿಯಲ್ ಅ ಸ್ಟೆಂಟ್ ಕೋರ್ಟು 1877ನೇ ಇಸವೀ ಮಾರ್ಚ 1ನೇ ಮತ್ತುಂ ಲಗಾಯತು ಏಪ್ರೆಲ್ 30ರ ವರಿವಿಗೆ ಎರಡು ತಿಂಗಳು ಮುಚ್ಚಲ್ಪಡುತ್ತೆ.

2. ಹಾಂಗೆ ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಶಿರಸ್ತೇದಾರು ಅಥವಾ ಕೋರ್ಟು ರೈಟರ್ ಪ್ರತಿ ಸೋಮವಾರ ವ ಬೃಹಸ್ಪತಿವಾರ ಈ ಎರಡು ದಿನಗಳಲ್ಲಿ ಆಫಿಸಿಗೆ ಬರುತ್ತಾರೆ, ಯಾವ ಬಗ್ಗೆ ಅಂದರೆ;—

(a) ಕಕ್ಷಿಗಾರು ಹಾಜರ್ಮಾಡಲಿಚ್ಛೈಸುವ ದಾವೆಗಳನ್ನು, ಅರ್ಜೀಗಳನ್ನು ಅಮಲ್‌ಜಾರಿ ವಗೈರೇ ಬಗ್ಗೆ ಅರ್ಜೀಗಳನ್ನು, ತೆಗದುಕ್ಕೊಳ್ಳಲಿಕ್ಕೂ,

(b) ಸಾದರಾತೀ ಬಗ್ಗೆ ಇತರ ಕೋರ್ಟುಗಳಿಂದ ಬರುವ ಸಮ್ಮನ್ಸುಗಳು, ವ ಇತರ ಪ್ರೊಸೆಸ್‌ಗಳು, ಇವುಗಳನ್ನು ಜಾರೀಲಿ ತರತಕ್ಕ ಬಗ್ಗೆ,

(c) ಅಪ್ಪೀಲಾದ ಮೊಕದ್ದಮೆಗಳಲ್ಲಿ ರಿಕಾರ್ಡ್ ರವಾನೇಬಗ್ಗೆ ಕಮ್ಮಿಷನರವರ ಕೋರ್ಟಿನಿಂದ ಬರುವ ಹುಕ್ಕುಂ ಗಳಿಗೆ ನಿಗೇ ಕೊಡತಕ್ಕ ಬಗ್ಗೆ, ಮತ್ತು

(d) ಕಕ್ಷಿಗಾರು ಕೇಳಿಕ್ಕೊಳ್ಳುವ ಜಡ್ಜ್‌ಮೆಂಟ್, ಡಿಕ್ರೀ, ವ ಹುಕ್ಕುಂ ಇವುಗಳ ಸ್ವೈ ಮೊಹರನ್ನಿನ ಇರುವ ಕಾಪೀ ಗಳನ್ನು ಕೊಡಲಿಕ್ಕೂ,

3. ಡಿಕ್ರೀ ಬಾಬತು ಹಣ ಪಾವತೀ ಮಾಡಲಿಕ್ಕೆ ಅಪೇಕ್ಷಿಸುವ ಕಕ್ಷಿಗಾರು ಶಿರಸ್ತೇದಾರರಿಂದ ಮಾಮೂಲ್ ಮೇರೆ ಡಿಮಾಂಜಿಟ್ ಆರ್ಡರ್ ಪಡೆದು ಡಿಸ್ಟ್ರಿಕ್ಟು ಟ್ರೆಜರೀಯಲ್ಲಿ ಹಣ ಪಾವತೀ ಮಾಡತಕ್ಕದ್ದೆಂತ ಆ ಆಫಿಸಲ್ಲಿ ತಿಳಿಸಲ್ಪಟ್ಟಿರುತ್ತಾರೆ, ಅಂತಾ ಆರ್ಡರಿಗೆ ಶಿರಸ್ತೇದಾರು "ಫಾರ್ ಜುಡಿಷಿಯಲ್ ಅಸಿಸ್ಟೆಂಟ್" ಯೆಂಬದಾಗಿ ದಸ್ತಖತ್ ಮಾಡತಕ್ಕದ್ದು

4. ಕೋರ್ಟು ಹುಕ್ಕುಂನಿಂದ ಚಿತ್ರದುರ್ಗ ಡಿಸ್ಟ್ರಿಕ್ಟ್ ಸಿವಿಲ್ ಜೈಲ್‌ನಲ್ಲಿ ಇಟ್ಟಲ್ಪಟ್ಟಿರುವ ಪ್ರತಿವಾದಿಗಳಿಗೆ ಭತ್ಯವನ್ನು ಅಡ್ವಾನ್ಸ್ ಕಟ್ಟತಕ್ಕ ಬಗ್ಗೆ ಅಪೇಕ್ಷಿಸುವ ಕಕ್ಷಿಗಾರು ಸ್ನ 1859ನೇ ಇಸವೀ 8ನೇ ನಂಬರ್ ಆಕ್ಟಿನ 276ನೇ ಸೆಕ್ಷನ್ ಪ್ರಕಾರ ಚಿತ್ರದುರ್ಗ ಜೈಲ್ ಕೀಪರ್ ವಶದಲ್ಲಿ ಪಾವತೀ ಮಾಡತಕ್ಕದ್ದು.

J. D. GORDON, *Judl. Commr.*

ಪೋಲೀಸ್ ಇಲಾಖಾ.

ತಾರೀಖು 19ನೇ ಮಾರ್ಚೀ 1877.

ಬೆಂಗಳೂರು ಡಿಸ್ಟ್ರಿಕ್ಟ್ 2ನೇ ಕ್ಲಾಸ್ ಇನ್‌ಸ್ಪೆಕ್ಟರ್ ರಾಘವಾಚಾರ್ರಿಗೆ ಮಾಡೇ ಮಜಕೂರು 13ನೇ ಮತ್ತುಂ ಲಗಾಯತು 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

"ಹುಕ್ಕುಂ ಬಮೋಜೀಬ್,"
J. S. F. MACKENZIE,
Offg. Dy. Inspector General of Police.

ಇನಾಂ ಇಲಾಖಾ.

ನಂ. 20. ತಾರೀಖು 10ನೇ ಮಾರ್ಚ 1877.

ಇದರಿಂದ ಪ್ರಸಿದ್ಧಪಡಿಸುವದೇನಂದರೆ—ಈ ಮಾರ್ಜಿನ್ನಲ್ಲಿ ಕಾಣಿಸಲ್ಪಟ್ಟ ಇನಾಮಿನ 986ನೇ ನಂಬರ್ ಬಾಬತು ಪರಿಷ್ಕರಿಸಲ್ಪಟ್ಟ ಟೈಟಲ್ ಡೀಡ್ ಯಾನೇ ಸನ್ನದ್, ಮಾಹೆಗುದಸ್ತಾ 24ನೇ ಮತ್ತುಂ ಮೈಸೂರು ಗೆಜಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1877ನೇ ಇಸವಿ ಫಿಬ್ರವರಿ 16ನೇ ಮತ್ತುಂ 19ನೇ ನಂಬರ್ ಬಾಬತು ಈ ಆಫಿಸ್ ಇಸ್ತಿಹಾರ್ ಪ್ರಕಾರ ಈ ದಿನ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ವ ಗ್ರಾಮ	ಇನಾಂದಾರನ ಹೆಸರು.	ಇನಾಂ ಟೈಟಲ್ ಡೀಡ್ ತರಹೆ. ನಂಬರ್.	ಬೀಜವರಿ.	ಕಂದಾಯ.	ಜೋಡಿ	ಜೋಡಿ ರಿಕ್ವಿಟ್ ಟಿ.	ಡೀಡ್ ಕೊಟ್ಟ ತಾರೀಖು.
ಶಿಡ್ಲಘಟ್ಟ. ಅಬ್ಬಲೋಡು	ಶಿಡ್ಲಘಟ್ಟದ ಸುಬ್ರಹ್ಮಣ್ಯ ಬ್ಯಾಣಸ್ತಿ ವರಣಾಸ್ತಿ 2 ನಾದಾಯ.	986	ಎಕರೆ. 4·38	ರೂ.ಆ.ಪೈ. 61—15	0	ರೂ.ಆ.ಪೈ. 0—14—	13-3-77

ಸದರೀ ಟೈಟಲ್ ಡೀಡನ್ನು ಕೊಡಲಿಕ್ಕೆ ಉಂಟಾದ ಸಬಬ್ ಅದರ ಮೇಲೆ ಬರಿಯಲ್ಪಟ್ಟಿರುತ್ತೆ.